

ಮುಂದಣ ಲೋಕವು ಮಸುಕು ಮಸುಕು. ಆಗ ನನ್ನ ಪರಿಸ್ಥಿತಿ ಹಾಗೇ ಇರುತ್ತಿತ್ತು, ಒಂದು ರೀತಿ ಮೋಡಕವಿದ ವಾತಾವರಣ ಅನ್ನುತ್ತಾರಲ್ಲ ಹಾಗೆ. ನನ್ನ ಕವಿತೆಗಳನ್ನು ಅರ್ಥವೇ ಮಾಡಿಕೊಳ್ಳದ ಹುಡುಗನ ಕಿವಿಗಳ ಮುಂದೆ ಅವುಗಳಿಗೆ ರಾಗ ಹಾಕಿ ಹಾಕಿ ನಾನು ಆರ್ದ್ರಳಾಗಿ ಹಾಡುತ್ತಿದ್ದರೂ, ಅದು ಪ್ಯಾಲಿ ಮತ್ತೊಂದು ಬಗೆಯ ಸಂಗೀತಕ್ಕೆ ಮನಸೋತು ನನ್ನ ಹಾಡನ್ನು ಕಡೆತನಕವೂ ಕೇಳಿಸಿಕೊಳ್ಳಲೇ ಇಲ್ಲ. ಅದೆಲ್ಲ ನೆನಪಾದರೆ ಸಿಡಿಲು ಬಡಿದಂತಾಗುತ್ತದೆ. ಆದರೆ ಸುರಿವ ಮಳೆ ಒಂದಲ್ಲ ಒಮ್ಮೆ ನಿಲ್ಲುವ ಹಾಗೆ ಆ ನೋವಿನ ಮಳೆಯೂ ನಿಂತು, ಮನಸು ಎಲ್ಲವನು ಮರೆತು ಬಿಸಿಲು ಮೂಡಿತ್ತು. ಬಾಲ್ಯದಲ್ಲಿ ಜನಪದ ಗೀತೆಯ ಸ್ಪರ್ಧೆಯಲ್ಲಿ 'ಯಾತಕ್ಕೆ ಮಳೆ ಹೋದವೋ, ಲೋಕಾ ತಲ್ಲಣಿಸುತಾವೋ' ಎಂಬ ಹಾಡನ್ನು ಹಾಡಿಮುಗಿಸಿದಾಗ, ತುಂಬ ಸಿಡುಕು ಎಂದು ಎಲ್ಲರೂ ಭಾವಿಸಿದ್ದ ಮೇಷ್ಟರ ಕಣ್ಣು ಕೂಡಾ ತುಂಬಿಕೊಂಡದ್ದರ ನೆನಪಿನ ಮುಂದೆ ಈ ನೋವೆಲ್ಲ ಅರ್ಥಹೀನ ಎನಿಸಿಬಿಡುತ್ತದೆ.

ಒಮ್ಮೆ ಕ್ಲಾಸಿನಲ್ಲಿ ಇದ್ದ ನಾವು ಆರೇ ಜನ ಸ್ನಾತಕೋತ್ತರ ಚೆಲುವೆಯರು ಒಬ್ಬ ಗೆಳತಿಯ ಮನೆಗೆ ಈದಮಿಲಾದಿನ ಹಬ್ಬಕ್ಕೆ ಸುರಕುಂಬ ಕುಡಿಯಲು ಹೋಗಿದ್ದೆವು. ಸುರಕುಂಬವೆಂದರೆ ಮೂಗು ಕೊಯ್ಯಿಸಿಕೊಳ್ಳುವ ನಾನು, ಹಾಡುವುದನ್ನು ಮರುಳಾದವಳಂತೆ ಕೇಳುತ್ತಿದ್ದ ಗೆಳತಿ 'ಸಾಕು ನಿಲ್ಲಿಸು' ಅನ್ನುವತನಕ ಹಾಡಿ, ಹೊಟ್ಟೆತುಂಬ ಅದನ್ನು ಕುಡಿದು ಮನೆಗೆ ಮರಳುತ್ತಿದ್ದೆ. ಹಾಗೆ ವಾಪಾಸು ಬರುವಾಗ ಮಳೆ ನಿಂತರೂ ಮರದ ಹನಿ ನಿಲ್ಲದು ಅಂತ ಒಂದು ನುಡಿಗಟ್ಟು ಯಾಕೋ ಬಾಯಿಗೆ ಬಂದುಬಿಟ್ಟಿತು, ಅಂದುಬಿಟ್ಟೆ. ಪಠ್ಯ, ಪರೀಕ್ಷೆಯೆಂದರೆ ಸಾಕು ಸದಾ ನನ್ನೊಡನೆ ಚಕಮಕಿಗಿಳಿದು, ಸ್ವಯಂಸ್ಪರ್ಧೆ ಏರ್ಪಡಿಸಿಕೊಂಡು ಬಿಡುತ್ತಿದ್ದ ಸಹಪಾಠಿಯೊಬ್ಬಳು,